ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp. 1-8
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

ಜಕ್ಕಣ ಏಕಾಂಕ ನಾಟಕದಲ್ಲಿ ಮೌಲ್ಯಗಳ ಜಿಜ್ಞಾಸೆ

ವಿಜಯ್ ಕುಮಾರ್ ಟಿ.[1] **ಮತ್ತು ಡಾ. ಬಿ.ಎಸ್. ಸುದೀಪ್**[2]
[1]ಸಂಶೋಧನಾ ವಿದ್ಯಾರ್ಥಿ, [2]ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಕನ್ನಡ ಸ್ನಾತಕೋತ್ತರ ವಿಭಾಗ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಮೈಸೂರು.

Abstract:
ಅಂತರಂಗ ಮತ್ತು ಬಹಿರಂಗ ಜೀವನಗಳು ಮಾನವನ ಜೀವನದ ಎರಡು ಪ್ರಮುಖ ಮುಖಗಳಾಗಿವೆ. ಈ ಮುಖಗಳನ್ನು 'ಸಂಸ್ಕೃತಿ' ಮತ್ತು 'ನಾಗರಿಕತೆ' ಎಂಬ ಶಬ್ದಗಳು ಸೂಚಿಸುತ್ತವೆ. ನಾಗರಿಕತೆಯು ಮಾನವನ ಬಹಿರಂಗ ಜೀವನಕ್ಕೆ ಸಂಬಂಧಿಸಿದ ಅಂಶಗಳನ್ನು ನಿರ್ದೇಶಿಸಿದರೆ; ಸಂಸ್ಕೃತಿಯು ಆತನ ಅಂತರಂಗದ ಜೀವನದ ಕನ್ನಡಿಯಾಗಿ ಪ್ರತಿಫಲಿಸುತ್ತದೆ. ಕನ್ನಡ ಸಾಹಿತ್ಯದಲ್ಲಿ ದೇಶೀಯ ಚಿಂತನೆಗಳನ್ನು ತಮ್ಮ ಸಾಹಿತ್ಯದ ಅಂತಃಸತ್ವವನ್ನಾಗಿಸಿಕೊಂಡು ಪ್ರಭಾವ ಬೀರಿರುವ ಲೇಖಕರಲ್ಲಿ ಚಂದ್ರಶೇಖರ ಕಂಬಾರರೂ ಒಬ್ಬರು. ಇವರ ಕೆಲವು ನಾಟಕಗಳು ಐತಿಹಾಸಿಕ ವಸ್ತುವನ್ನೊಳಗೊಂಡ ಸುಂದರ ಕಲಾಕೃತಿಗಳಾಗಿವೆ. ಇವುಗಳಲ್ಲಿ 'ಜಕ್ಕಣ' ಐತಿಹಾಸಿಕ ಸನ್ನಿವೇಶದ ವಸ್ತುವನ್ನೊಳಗೊಂಡ ವಿಶೇಷ ಏಕಾಂಕ ನಾಟಕವಾಗಿದೆ. ಈ ನಾಟಕವು ಜಕಣಾಚಾರಿ ಮತ್ತು ಅವನ ಮಗ ಡಂಕಣಾಚಾರಿಯ ಜೀವನದ ವೃತ್ತಾಂತವನ್ನು ಆಧರಿಸಿದೆ.

Keywords: *ಚಂದ್ರಶೇಖರ ಕಂಬಾರ, ಜಕ್ಕಣ, ಏಕಾಂಕ ನಾಟಕ, ಜಕಣಾಚಾರಿ, ಡಂಕಣಾಚಾರಿ, ಸಂಸ್ಕೃತಿ ಮತ್ತು ನಾಗರಿಕತೆ.*

ಪೀಠಿಕೆ

"ಸಂಸ್ಕೃತಿಯೆಂಬುದು ವ್ಯಕ್ತಿಯ ಸ್ವಭಾವಕ್ಕೆ ಸಂಸ್ಕಾರವನ್ನು ಕೊಡುವ ಶಕ್ತಿಯಾಗಿದೆ."[1] "ಒಳ್ಳೆಯದನ್ನು ಬಯಸುವುದೂ, ಒಳ್ಳೆಯದನ್ನು ಪ್ರೀತಿಸುವುದೂ ಸಂಸ್ಕೃತಿಯ ಸಲ್ಲಕ್ಷಣವಾಗಿದೆ."[2] ವ್ಯಕ್ತಿಯ ಮನಸ್ಸಿನ ಮೇಲೆ ಒಂದು ಸಂಸ್ಕಾರವನ್ನುಂಟುಮಾಡಿ ಆತನನ್ನು ಪೂರ್ಣತೆಯ ಕಡೆಗೆ ನಡೆಯುವಂತೆ ಮಾಡುವುದೇ ಸಂಸ್ಕೃತಿಯ ಪರಮ ಪ್ರಯೋಜನವಾಗಿದೆ.[3] ಕನ್ನಡ ಸಾಹಿತ್ಯದಲ್ಲಿ ದೇಶೀಯ ಚಿಂತನೆಗಳನ್ನು ತಮ್ಮ ಸಾಹಿತ್ಯದ ಅಂತಃಸತ್ವವನ್ನಾಗಿಸಿಕೊಂಡು ಪ್ರಭಾವ ಬೀರಿರುವ ಲೇಖಕರಲ್ಲಿ ಚಂದ್ರಶೇಖರ ಕಂಬಾರರೂ ಒಬ್ಬರು. ಇವರ ಕೆಲವು ನಾಟಕಗಳು ಐತಿಹಾಸಿಕ ವಸ್ತುವನ್ನೊಳಗೊಂಡ ಸುಂದರ ಕಲಾಕೃತಿಗಳಾಗಿವೆ. ಇವುಗಳಲ್ಲಿ 'ಜಕ್ಕಣ' ಐತಿಹಾಸಿಕ ಸನ್ನಿವೇಶದ ವಸ್ತುವನ್ನೊಳಗೊಂಡ ವಿಶೇಷ ಏಕಾಂಕ ನಾಟಕವಾಗಿದೆ. "ನಮ್ಮ ದೇಶದಲ್ಲಿ ಯಾವುದಾದರೂ ಸುಂದರ ದೇವಾಲಯ ಕಂಡುಬಂದರೆ ಅದು 'ಜಕಣಾಚಾರಿ ಕಟ್ಟಿಡ' ಎಂಬ ಪ್ರತೀತಿಗೆ ಗುರಿಯಾಗಿದೆ. ಒಂದು ವೇಳೆ, ಅದು ಜಕಣಾಚಾರಿಯದಲ್ಲ ಎಂದು ಹಟ ಹಿಡಿದರೆ 'ಹೋಗಲಿ ಬಿಡಯ್ಯ, ಅದು ಅವನ ಮಗ ಡಂಕಣಾಚಾರೀದು' ಎಂಬ ಮಾತು ಕಿವಿಗೆ ಬೀಳುತ್ತದೆ. ಈ ತಂದೆ ಮಕ್ಕಳಿಬ್ಬರೂ ನಮ್ಮ ದೇಶದ

Please cite this article as: ವಿಜಯ್ ಕುಮಾರ್ ಟಿ. ಮತ್ತು ಬಿ.ಎಸ್. ಸುದೀಪ್. (2024). ಜಕ್ಕಣ ಏಕಾಂಕ ನಾಟಕದಲ್ಲಿ ಮೌಲ್ಯಗಳ ಜಿಜ್ಞಾಸೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(6), 1–8.

ಐತಿಹ್ಯಗಳಲ್ಲೊಂದಾಗಿ ಪರಿಣಮಿಸಿದ್ದಾರೆ."[4] ಇವರಿಬ್ಬರ ಜೀವನ ವೃತ್ತಾಂತವನ್ನು ಆಧರಿಸಿ ಈ ನಾಟಕವನ್ನು ರಚಿಸಲಾಗಿದೆ. ಇತಿಹಾಸ ಪ್ರಸಿದ್ಧ 'ಬೇಲೂರು' ಇದರ ಮುಖ್ಯ ಭೂಮಿಕೆಯಾಗಿದೆ. ಮನುಷ್ಯನ ವಿದ್ಯೆ ಅಥವಾ ಪಾಂಡಿತ್ಯ ಆತನನ್ನು ವಿನಯವಂತನಾಗಿ; ಸಮಾಜದ ಕಾಳಜಿ ಇರುವ ಸಾಮಾಜಿಕ ಜೀವಿಯಾಗಿ ಮಾಡಬೇಕೆ ವಿನಾ ಅಹಂಕಾರದಿಂದ ಮನುಷ್ಯತ್ವವನ್ನು ಕಳೆದುಕೊಂಡು ಕಲ್ಲಿನಂತಾಗಬಾರದು ಎಂಬ ಜೀವನ ತತ್ವವನ್ನು ನಾಟಕ ಸಾರುವುದಲ್ಲದೆ ಶಾಸ್ತ್ರದ ಕುರಿತು ಜಕ್ಕಣನಿಗಿದ್ದ (ಅಥವಾ ಜಕ್ಕಣನಂತೆ ಶಾಸ್ತ್ರವನ್ನು ಕುರುಡಾಗಿ ನಂಬುವ ಜನರಿಗಿರುವ) ನಂಬಿಕೆಯನ್ನು ಪ್ರಶ್ನಿಸುವ ಆಶಯವನ್ನೂ ಸಹ ಹೊಂದಿದೆ.

ಜಕ್ಕಣ ಶಿಲ್ಪಕಲಾಶಾಸ್ತ್ರದಲ್ಲಿ ಶ್ರೇಷ್ಠ ಪಂಡಿತನಾಗಿದ್ದರೂ ನಿಜ ಜೀವನದಲ್ಲಿ ಹೆಂಡತಿ ಮಕ್ಕಳನ್ನು ಅರಿಯುವ ಮನಃಶಾಸ್ತ್ರವನ್ನು ಅರಿಯದೆ ಹೋಗುತ್ತಾನೆ. ತನ್ನ ಹೆಂಡತಿ ಭವಾನಿಗೆ ಹುಟ್ಟಿದ ಗಂಡು ಮಗುವನ್ನು ನೋಡಿ, ಆಡಿ, ಜೊತೆಗಿದ್ದು ಸುಖಿಸುವ ಬದಲು, ಮಗುವಿನ ಜನ್ಮಜಾತಕವನ್ನು ಕಂಡು ಅದರಲ್ಲಿದ್ದ ಶಾಸ್ತ್ರದೋಷವನ್ನು ನಂಬಿ, ಹುಟ್ಟಿದ ಮಗುವನ್ನೂ ಹೆಂಡತಿಯನ್ನೂ ಕ್ರೀಡಾಪುರದಲ್ಲಿ ಬಿಟ್ಟು ಬೇಲೂರಿಗೆ ಬಂದು ಸೇರುತ್ತಾನೆ. ಅಲ್ಲಿ ತನ್ನ ಹೆಸರು, ಊರು ಹಾಗೂ ಸ್ವಂತ ವಿಷಯಗಳನ್ನು ಹೇಳಿಕೊಳ್ಳದೆ ಮುಖ್ಯ ಸ್ಥಪತಿಯಾಗಿ ಕಾರ್ಯನಿರ್ವಹಿಸುತ್ತಿರುತ್ತಾನೆ.

ಇತ್ತ ಕಡೆ ಬೆಳೆದು ದೊಡ್ಡವನಾದ ಅವನ ಮಗ ಡಂಕಣ ತನ್ನ ತಾಯಿಯಲ್ಲಿ ತನ್ನ ತಂದೆಯ ಪರಿಚಯವನ್ನು ಕುರಿತು ಕೇಳಲಾಗಿ ಅವನಿರುವ ವಿಳಾಸ ಅವಳಿಗೂ ತಿಳಿಯದ ಕಾರಣ ಸ್ವಯಂ ತಾನೇ ಹುಡುಕಲು ಮುಂದಾಗಿ ಹುಟ್ಟಿದ ಊರನ್ನು ಬಿಟ್ಟು ಊರಿಂದ ಊರಿಗೆ ಅಲೆಯುತ್ತಾನೆ. ತನ್ನ ತಂದೆ ಶ್ರೇಷ್ಠ ಶಿಲ್ಪಕಾರನೆಂದು ತನ್ನ ತಾಯಿಯಿಂದ ಕೇಳಿ ತಿಳಿದಿದ್ದ ಅವನು ಎಲ್ಲೆಲ್ಲಿ ದೇವಾಲಯಗಳು ನಿರ್ಮಾಣವಾಗುತ್ತಿರುತ್ತವೋ ಅಲ್ಲೆಲ್ಲ ಹೋಗಿ ತಂದೆಯ ಹುಡುಕಾಟ ನಡೆಸುತ್ತಾನೆ. ಇತ್ತ ಗಂಡನನ್ನೂ ಮಗನನ್ನೂ ಕಳೆದುಕೊಂಡ ಭವಾನಿ ಅವರಿಬ್ಬರನ್ನೂ ಅರಸುತ್ತಾ ಅಲೆಯುತ್ತಾ ಬಳಲುತ್ತಾಳೆ. ದೇವರ ಕೃಪೆ ಎಂಬಂತೆ ಆ ಮೂವರ ಸಂಗಮವು ಬೇಲೂರು ಚೆನ್ನಕೇಶವನ ಸನ್ನಿಧಿಯಲ್ಲಿ ಏರ್ಪಡುತ್ತದೆ. ತನ್ನ ಗಂಡನು ನಿರ್ಮಿಸುತ್ತಿರುವ ದೇವಾಲಯಕ್ಕೆ ಬಂದ ಭವಾನಿ "ನಡು ಹಗಲು ಸುಡುಬಿಸಿಲಲ್ಲಿ ಕೆಂಪು ಹೂವರಳಿ ಉರಿಯುವ ಮರದ ನೆರಳಲ್ಲಿ ಕೂರಲಾರದೆ ಮುರಿದ ಮಾತು ಹರಿದ ಕನಸುಗಳ ಕನವರಿಸುತ್ತಾ ಮಲಗಿರುತ್ತಾಳೆ."[5] ಈ ವೇಳೆಗೆ ಆಕೆಯ ಮಗ ಡಂಕಣನೂ ಅಲ್ಲಿಗೆ ಬಂದು ದೇವಾಲಯವನ್ನು ವೀಕ್ಷಿಸುತ್ತಿರುತ್ತಾನೆ. ಹೀಗೆ ದೇವಾಲಯವನ್ನೂ ಅಲ್ಲಿರುವ ಕೆತ್ತನೆಗಳನ್ನೂ ನೋಡುತ್ತಾ ಮುಂದುವರಿದ ಡಂಕಣನಿಗೆ ಅಲ್ಲಿದ್ದ ಚೆನ್ನಕೇಶವನ ಮೂರ್ತಿಯಲ್ಲಿ ದೋಷವಿರುವುದು ತಿಳಿಯುತ್ತದೆ. ಅದನ್ನು ಅದರ ಮುಖ್ಯಶಿಲ್ಪಿಯಾದ ಜಕ್ಕಣನಿಗೆ ತಿಳಿಸುತ್ತಾನೆ. ಆದರೆ ಪಾಂಡಿತ್ಯ ಮದದಿಂದ ಅಹಂಕಾರಕ್ಕೊಳಗಾಗಿದ್ದ ಜಕ್ಕಣ ಅದನ್ನು ಒಪ್ಪದೇ ತಾನು ಶಾಸ್ತ್ರವನ್ನು ನಂಬಿರುವುದಾಗಿಯೂ ಆ ಶಾಸ್ತ್ರದ ಪ್ರಕಾರದಂತೆಯೇ ನಿಯಮಗಳನ್ನು ಪಾಲಿಸಿ ಆ ಮೂರ್ತಿಯನ್ನು ನಿರ್ಮಿಸಿರುವುದಾಗಿಯೂ ವಾದಿಸುತ್ತಾನೆ. ಜಕ್ಕಣನು ತಾನು ಮಾಡಿರುವ ಕೆಲಸವನ್ನು ಸಮರ್ಥಿಸಿಕೊಳ್ಳಲು ಶಾಸ್ತ್ರದ ಮೊರೆ ಹೋದಾಗ ಅದಕ್ಕೆ ಉತ್ತರವಾಗಿ ಡಂಕಣನು "ಶಾಸ್ತ್ರ ಮೂರ್ತಿಯ ಪ್ರಮಾಣವನ್ನು ಹೇಳಬಲ್ಲದು. ಅದು ಅಂತರಂಗವನ್ನು ತೋರಿಸಲಾರದು. ನಿಮಗೆ ಕಲ್ಲಿನ ಶಾಸ್ತ್ರ, ಕಲೆಯ ಶಾಸ್ತ್ರ ಎರಡೂ ಗೊತ್ತಿದೆ ಆದರೆ ಈ ಮೂರ್ತಿಯ ವಿಷಯದಲ್ಲಿ ಮಾತ್ರ ಕಲ್ಲಿನ ಅಂತರಂಗ ತಿಳಿದಿಲ್ಲವೆಂದೇ ಹೇಳಬೇಕಾಗುತ್ತದೆ"[6] ಎನ್ನುತ್ತಾನೆ.

ಇಲ್ಲಿ 'ಕಲ್ಲಿನ ಅಂತರಂಗ' ಎಂಬ ಮಾತು ಕೇವಲ ಕಲ್ಲಿನ ಅಂತರಂಗವಾಗಿರದೆ ಮನುಷ್ಯನ ಅಥವಾ ಜಕ್ಕಣನ 'ಆತ್ಮರಂಗ'ವಾಗಿದೆ. ಶಾಸ್ತ್ರದ ಹಿಂದೆ ಬಿದ್ದಿರುವ ಜಕ್ಕಣನ ಮನಸ್ಥಿತಿಯನ್ನು ಸರಿಪಡಿಸಿ ಅದು ಮಾನವಿಕ ಸಂಬಂಧಗಳತ್ತ ಹರಿಯುವಂತೆ ಮಾಡುವುದು ಈ ನಾಟಕದ ಉದ್ದೇಶವಾಗಿದೆ.

ಮಾತನಾಡದ ಕಲ್ಲುಗಳ ಶಾಸ್ತ್ರವನ್ನು ಅರಿತಿರುವ ಜಕ್ಕಣ ಜೀವವಿರುವ ತನ್ನ ಹೆಂಡತಿ ಹಾಗೂ ಮಗನ ಭಾವನೆಗಳನ್ನು ಅರಿಯುವಲ್ಲಿ ವಿಫಲನಾಗಿದ್ದಾನೆ. ಈ ಕಾರಣದಿಂದಲೇ ಅವನು 'ಕಲ್ಲಿನಲ್ಲಿ ದೋಷವಿದೆ' ಎಂಬ ಡಂಕಣನ ವಾದವನ್ನು ಒಪ್ಪದೇ ಅವನನ್ನು ಹೀಯಾಳಿಸುತ್ತಾನೆ. ಈ ಸಂದರ್ಭದಲ್ಲಿ ಜಕ್ಕಣನಿಂದ ಪ್ರಯೋಗವಾಗಿರುವ "ಉತ್ತರದ ಗೋದಾವರಿಯಿಂದ ದಕ್ಷಿಣದ ಕನ್ಯಾಕುಮಾರಿಯ ತನಕ ವಿಜಯ ಧ್ವಜ ಹಾರಿಸಿದ ಈ ಆಚಾರ್ಯನಿಗೆ ಕಲ್ಲಿನ ಅಂತರಂಗ ತಿಳಿದಿಲ್ಲವೆಂದು, ಕವಡೆ ಆಡುವ ಹುಡುಗನೊಬ್ಬ ಹೇಳುವಂತಾದುದು ಈ ನೆಲದ ಮಹಿಮೆಯಲ್ಲವೆ?"[6] ಎಂಬುದು ಒಂದು ಅಣಕದ ಮಾತಾಗಿದ್ದರೂ ಅದು ಕನ್ನಡದ ಆದ್ಯ ಲಕ್ಷಣಗ್ರಂಥ ಎನಿಸಿರುವ 'ಕವಿರಾಜಮಾರ್ಗ' ಕೃತಿಯಲ್ಲಿ ಬರುವ "ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್" ಎಂಬ ಮಾತನ್ನು ನೆನಪಿಸುತ್ತದೆ.

ತನ್ನ ಅಪಾರ ಪಾಂಡಿತ್ಯ ಕುರಿತು ಅಹಂಕಾರ ಹೊಂದಿರುವ ಜಕ್ಕಣನಿಗೆ ಮಾನವೀಯ ಗುಣಗಳು ದೂರವೇ ನಿಂತಿರುತ್ತವೆ. ಆತ ತನ್ನೆದುರು ಕೇಶವನೇ ರೂಪದರ್ಶಿಯಾಗಿ ಬಂದು ನಿಂತು ತಿಂಗಳುಗಳ ಕಾಲ ಜೊತೆಗಿದ್ದರೂ ಸಹ ಅವನನ್ನು ಗುರುತಿಸಲಾಗದೇ ಹೋಗುತ್ತಾನೆ. ಅವನು ಶಿಲಾಬಾಲಿಕೆಯರ ಮೂರ್ತಿಯನ್ನು ತನ್ನ ತೊಡೆಯ ಮೇಲಿರಿಸಿಕೊಂಡು ಕೆತ್ತುವಾಗ 'ಸವುತೇ' ಎಂದು ನಟಿಕೆ ಮುರಿದು ಮತ್ಸರ ಹಾಗೂ ನೋವಿನಿಂದ ಗೋಳಾಡುವ ತನ್ನ ಹೆಂಡತಿಯ ಕೂಗನ್ನು ಕೇಳಿಸಿಕೊಳ್ಳದವನಾಗಿದ್ದಾನೆ. ಅದಲ್ಲದೆ ತನ್ನ ರೂಪವನ್ನೇ ಧರಿಸಿ ತನ್ನೆದುರು ಬಂದು ನಿಂತು ಮಾತನಾಡುವ ತನ್ನ ಮಗನನ್ನು ಗುರುತು ಹಿಡಿಯದೆ ಹೋಗುತ್ತಾನೆ. ಈ ಎಲ್ಲಾ ನಿದರ್ಶನಗಳಿಂದ ಅಹಂಕಾರವು ನಮಗೆ ಕಿವಿಗಳಿದ್ದರೂ ಕೇಳದಂತೆಯೂ; ಕಂಗಳಿದ್ದರೂ ಕಾಣದಂತೆಯೂ ಮಾಡಿಬಿಡುತ್ತದೆ ಎಂಬ ಮನೋವೈಜ್ಞಾನಿಕ ಸಂದೇಶ ಇಲ್ಲಿ ಗೋಚರಿಸುತ್ತದೆ.

ಜೀವವಿರುವ ಹೆಂಡತಿ ತಾನಿರುವಾಗ ತನ್ನನ್ನು ತಿರಸ್ಕರಿಸಿ ತನ್ನ ಗಂಡ ಹೆಣ್ಣಿನ ರೂಪದ ಒಂದು ಶಿಲೆಯನ್ನು ಮುಟ್ಟಿದರೂ ಸಹಿಸಲಾಗದ ಅಂತಃಕರಣವನ್ನು ನಾವು 'ಭವಾನಿ'ಯಲ್ಲಿ ಕಾಣುತ್ತೇವೆ. ನಮ್ಮ ಸಮಾಜದಲ್ಲಿ ಒಬ್ಬ ಸಾಮಾನ್ಯ ಹೆಣ್ಣು ಬಯಸುವ ಆಭರಣವೆಂದರೆ ಅದು ತನ್ನ ಗಂಡನ ಸಾನ್ನಿಧ್ಯ ಮತ್ತು ಒಲುಮೆಯನ್ನಲ್ಲದೆ ಮತ್ತೇನು? ಈ ಕಾರಣದಿಂದಾಗಿ ಆಕೆ ಭಾವವಿಲ್ಲದ ಆತನ ಎದೆಯಲ್ಲಿ ಭಾವ ಮೂಡಿಸಲು 'ದೇವರಿಲ್ಲದ ಗರ್ಭಗುಡಿಗೆ' ಮಂಗಳಾರತಿ ಮಾಡುತ್ತಾಳೆ.

'ಇದುವರೆಗೂ ಯಾರೂ ನನ್ನ ಪಾಂಡಿತ್ಯವನ್ನು ಪ್ರಶ್ನಿಸಿರಲಿಲ್ಲ!' ಎಂಬುದು ಜಕ್ಕಣನ ಅಹಂಕಾರಕ್ಕೆ ಕಾರಣವಾಗಿರುತ್ತದೆ. ಈ ಕಾರಣದಿಂದಲೇ ಡಂಕಣನು ಬಂದು ಆತನನ್ನು ಪ್ರಶ್ನಿಸಿದಾಗ ಆತನ ಆತ್ಮಬಲ ಕುಗ್ಗಿಹೋಗಿ ನಾನೂ ಒಬ್ಬ ಮನುಷ್ಯ. ನಾನೂ ಸಹ ಸಮಾಜದ ಜೀವಿ. ನಾನೂ ಸಹ ತಪ್ಪು ಮಾಡಿರಬಹುದು ಎಂಬ ಸುಳಿವು ಆತನ ಸ್ವಗತದಲ್ಲಿ ಮೂಡಿ "ನನ್ನನ್ನು ಮೀರಿದ ಒಂದರಿಂದ ವಿಪರೀತವಾದದ್ದೇನೋ ನಡೆಯುತ್ತಿದೆ ಅಂತ ಅನ್ನಿಸುತ್ತಿದೆಯಲ್ಲಾ!"[7] ಎಂದು ಆತ್ಮಾವಲೋಕನ ಮಾಡಿಕೊಳ್ಳುತ್ತಾನೆ. ಅಲ್ಲಿಗೆ ಈ ಸಂದರ್ಭದಲ್ಲಿ ಅವನಿಗೆ 'ತನ್ನನ್ನು ಮೀರಿದ ಯಾವುದೋ ಒಂದು ಶಕ್ತಿ ಇದೆ' ಎಂಬ ಅರಿವು ಚಿಗುರೊಡೆಯುತ್ತದೆ. ಆತನಿಗೆ ತನ್ನ ಕಲೆಯನ್ನು; ಪಾಂಡಿತ್ಯವನ್ನು; ಜ್ಞಾನವನ್ನು ಪ್ರಶ್ನಿಸುವವರು ಯಾರೋ ಬಂದರಲ್ಲ ಎಂಬ ಅಭದ್ರತೆ ಕಾಡುತ್ತದೆ. ಆದರೆ ಡಂಕಣ ಸಮಾಧಾನವಾಗಿ 'ದೋಷವಿರುವುದು ಕಲ್ಲಿನಲ್ಲಿ ಹೊರತು ವಿಗ್ರಹದಲ್ಲಲ್ಲ' ಎಂದು ಹೇಳುತ್ತಾನೆ.

ಇಲ್ಲಿ ನಾಟಕಕಾರರು 'ವಿಗ್ರಹ', 'ಕಲ್ಲು' ಎಂಬ ಪದಗಳನ್ನು ಸಾಂಕೇತಿಕವಾಗಿ ಬಳಸಿರುವುದನ್ನು ಗಮನಿಸಬೇಕಾಗುತ್ತದೆ. 'ವಿಗ್ರಹ' ಎಂದರೆ ಮೂರ್ತಿಯ ಹೊರ ರೇಖೆ. ಅದನ್ನು ವ್ಯಕ್ತಿಯಾಗಿ ಹೋಲಿಸಿ ನೋಡಿದರೆ ಅದು ವ್ಯಕ್ತಿಯ ಹೊರಚಹರೆಯನ್ನಷ್ಟೇ ತಿಳಿಸಿಕೊಡುತ್ತದೆ. ಆದರೆ

'ಕಲ್ಲು' ವಿಗ್ರಹದ ಮೂಲ ಸ್ವರೂಪ. ಇದನ್ನು ವ್ಯಕ್ತಿಯ 'ಅಂತರಾತ್ಮ' ಅಥವಾ 'ಆತ್ಮಸಾಕ್ಷಿಗೆ' ಹೋಲಿಸ ಬಹುದಾಗಿದೆ. ಹಾಗಾಗಿ ಇಲ್ಲಿ ದೋಷವಿರುವುದು ವಿಗ್ರಹದಲ್ಲಲ್ಲ. ಎಂದರೆ ಜಕ್ಕಣನ ಹೊರನೋಟದಲ್ಲಲ್ಲ. 'ಕಲ್ಲಿನ ಅಂತರಂಗದಲ್ಲಿ' ಎಂದರೆ ಆತನ 'ಆಂತರ್ಯ'ದಲ್ಲಿ ಎಂಬುದು ಸಿದ್ಧವಾಗುತ್ತದೆ. ಈ ಸಂದರ್ಭವು "ಶಾಸ್ತ್ರದಲ್ಲಿ ದೋಷವಿದ್ದರೆ ಹೃದಯದಲ್ಲಿ ತಿದ್ದಬಹುದು; ಆದರೆ ಹೃದಯದಲ್ಲಿ ದೋಷವಿದ್ದರೆ ಶಾಸ್ತ್ರ ಏನು ಮಾಡುವುದು?" ಎಂಬ ವರಕವಿ ಬೇಂದ್ರೆಯವರ ಮಾತನ್ನು ನೆನಪಿಸುತ್ತದೆ. ಅಥವಾ ಈ ಸನ್ನಿವೇಶಕ್ಕೆ ಆ ಮಾತು ಸರಿಯಾಗಿ ಹೊಂದುತ್ತದೆ. ಇಲ್ಲಿ ಜೀವವಿರುವ ಹೆಂಡತಿಯನ್ನು ನಂಬದ ಜಕ್ಕಣ ಶಾಸ್ತ್ರವನ್ನು ನಂಬಿರುವುದನ್ನು ನೋಡಿದರೆ ಅವನ ಹೃದಯದಲ್ಲಿ ದೋಷವಿರುವುದು ತಿಳಿಯುತ್ತದೆ. ಅದನ್ನೇ ಪ್ರಸ್ತುತ ನಾಟಕವು ತನ್ನ ವಸ್ತುವಾಗಿ ಸ್ವೀಕರಿಸಿದೆ. ಈ ಹೇಳಿಕೆಗಳು "ಯಾವ ಕಾಲದ ಶಾಸ್ತ್ರವೇನು ಹೇಳಿದರೇನು? ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?" ಎಂಬ ಕುವೆಂಪು ಅವರ ಮಾತನ್ನೂ ನೆನಪಿಸುತ್ತವೆ.

ಜಕ್ಕಣನ ಈ ಸ್ವರೂಪವನ್ನು ನಾಟಕದಲ್ಲಿ ಬರುವ

> ***"ಡಂಕಣ:*** ಸ್ಥಪತಿಗಳ ಬಗ್ಗೆ ನನಗೆ ಅಪಾರವಾದ ಗೌರವವಿದೆ ತಾಯಿ. ನನ್ನ ತಾಯಿಯಾಣೆಗೂ ಅವರನ್ನುಅವಮಾನಿಸುವುದು ನನ್ನ ಉದ್ದೇಶವಲ್ಲ. ಸ್ಥಪತಿಗಳು ಹೇಳಿದಂತೆ ಮೇಲುನೋಟಕ್ಕೆ ಕಲ್ಲು ದೋಷರಹಿತವಾಗಿಯೇ ಇದೆ. ಆದರೆ ದೋಷವಿರುವುದು ಕಲ್ಲಿನ ಅಂತರಂಗದಲ್ಲಿ! ಒಳಗೆ ಹುಸಿ ಮುಚ್ಚಿಕೊಂಡು ಹೊರಗೆ ಸಜ್ಜನಿಕೆ ಮೆರೆವ ಡಾಂಭಿಕನಂತೆ ಕಲ್ಲು ಇವರೊಂದಿಗೆ ಆಟವಾಡಿದೆ ತಾಯಿ!
>
> **ಶಾಂತಲೆ:** ಆ ದೋಷ ನಿನ್ನ ಕಣ್ಣಿಗೆ ಹ್ಯಾಗೆ ಬಿತ್ತು?
>
> **ಡಂಕಣ:** ಬಾಲ್ಯದಿಂದಲೂ ಕಲ್ಲಿನೊಂದಿಗೇ ಬೆಳೆದಿದ್ದೇನೆ, ಪಟ್ಟಮಹಾದೇವಿಯವರೆ, ಅವು ತಮ್ಮ ಅಂತರಂಗವನ್ನು ತೆರೆದು ತೋರಿಸಿ ನನಗೆ ತಮ್ಮ ಕಥೆಯನ್ನು ಹೇಳುತ್ತವೆ.
>
> **ಶಾಂತಲೆ:** ಆ ಕಲ್ಲು ಸ್ಥಪತಿಗಳಿಗೂ ತನ್ನ ಅಂತರಂಗವನ್ನು ತೋರಿಸಿರಬೇಕಲ್ಲ?
>
> **ಡಂಕಣ:** ಇವರು ನೋಡಿಲ್ಲ. ನೋಡಿದ್ದರೆ ಆ ಕಲ್ಲನ್ನು ಆರಿಸುತ್ತಿರಲಿಲ್ಲ.
>
> **ಜಕ್ಕಣ:** (*ವ್ಯಂಗ್ಯದಿಂದ*) ನಿನಗಿನ್ನಾವುದೋ ಮೂರನೆಯ ಕಣ್ಣಿದ್ದಂತೆ ಮೊಳಗುವ ನುಡಿಗಳನ್ನು ಆಡುತ್ತಿರುವೆ ಬಾಲಕಾ. ನಿನಗೆ ಮಾತ್ರ ಕಂಡಿರುವ ಕಲ್ಲಿನ ದೋಷವನ್ನು ನಾವೂ ನೋಡಬಹುದೆ?
>
> **ಡಂಕಣ:** (*ಅಷ್ಟೇ ವ್ಯಂಗ್ಯದಿಂದ*) ನೋಡಬಹುದು ನೋಡುವ ಕಣ್ಣಿದ್ದರೆ."[8]

ಎಂಬ ಸಂಭಾಷಣೆಯಲ್ಲಿ ಇನ್ನಷ್ಟು ವಿಸ್ತಾರವಾಗಿ ಕಾಣಬಹುದು. ಇಲ್ಲಿರುವ "ನೋಡುವ ಕಣ್ಣಿದ್ದರೆ" ಎಂಬ ಮಾತು ಶ್ರೀ ಕನಕದಾಸರ "ನಾನು ಹೋದರೆ ಹೋದೇನು" ಎಂಬ ಅಹಂಕಾರವನ್ನು ಕಳಚಿಕೊಳ್ಳುವ ತತ್ವಪೂರಿತ ಮಾತನ್ನೂ ಶ್ರೀ ಕುವೆಂಪುರವರ "ದೃಷ್ಟಿಯಂತೆ ಕಾಣ್ಕೆ" ಎಂಬ ಮಾತನ್ನೂ ಧ್ವನಿಸುವಂತಿದೆ.

ಈ ಸನ್ನಿವೇಶದಲ್ಲಿ ಡಂಕಣನು ಶಾಂತಲೆಯಲ್ಲಿ ತನ್ನ ವಾದವನ್ನು ಮುಂದಿರಿಸಿ ಅಲ್ಲಿಂದ ಹೊರಡುವ ಪ್ರಸಂಗ ಬರುತ್ತದೆ. ಆಗ ಜಕ್ಕಣನು "ನಿಲ್ಲು. ಪಟ್ಟಮಹಾದೇವಿಯವರ ಅಪ್ಪಣೆ ಇಲ್ಲದೆ ಹೊರಟಿದ್ದೀಯಲ್ಲ, ಎಷ್ಟಯ್ಯಾ ನಿನ್ನ ಕೊಬ್ಬು? ಹೇಳಿಕೊಳ್ಳಲು ಒಬ್ಬ ಗುರುವಿನ ಗುರುತು ಕೂಡ ಇಲ್ಲದ ನೀನು ರೂವಾರಿಯ ಕುಲದಲ್ಲಿ ಹುಟ್ಟಿದವನೆಂಬುದೂ ಹುಸಿ, ಯಾವನೋ ಅಡ್ಡ ಕಸುಬಿಗೆ ಹುಟ್ಟಿ..."[9] ಎಂಬ ತೀರಾ ಅಸಹನೀಯ ಮಾತುಗಳನ್ನಾಡುತ್ತಾ ಅವನನ್ನು ತಡೆಯುತ್ತಾನೆ. ಇಲ್ಲಿ ಡಂಕಣನು ಜಕ್ಕಣನ ಪಾಂಡಿತ್ಯವನ್ನು ಪ್ರಶ್ನಿಸಿದನು ಎಂಬ ಅಸಮಾಧಾನ ಒಂದು ಕಡೆಯಾದರೆ; 'ಹಿರಿಯರೊಂದಿಗೆ ಮಾತನಾಡುವಾಗ ಅವರ ಅಪ್ಪಣೆ ಇಲ್ಲದೆ ಅಲ್ಲಿಂದ ಹೊರಡಬಾರದು' ಎಂಬ ಸಾಂಸ್ಕೃತಿಕ ಪ್ರಜ್ಞೆಯನ್ನು ಗಮನಿಸಬಹುದಾಗಿದೆ.

ಜಕ್ಕಣನು ಈ ಮಾತುಗಳನ್ನು ಕೆರಳಿ ಆಡಿದ್ದನ್ನು ನೋಡಿದರೆ ಇಲ್ಲಿ ಪ್ರಮಾದವಾಗಿರುವುದು ಅನುಮತಿ

ಇಲ್ಲದೆ ಹೊರಟಿದ್ದಕ್ಕೋ ಅಥವಾ ಅವನ ಪಾಂಡಿತ್ಯವನ್ನು ಪ್ರಶ್ನಿಸಿದನೆಂಬ ಅಸಹನೆಗೋ ತಿಳಿಯುವುದಿಲ್ಲ. ಆದರೆ ಈ ಒಂದೇ ಮಾತಿನಲ್ಲಿ ಸಮಾಜದೆದುರು ಶ್ರೇಷ್ಠನೆಂದು ಬೆಳೆದು ನಿಂತಿರುವ ಒಬ್ಬ ಪಂಡಿತನನ್ನು, ಹೇಳಲು ಹೆಸರು, ಕುಲ, ಗೋತ್ರಗಳಾವುವೂ ಇಲ್ಲದ 'ಕವಡೆ ಆಡುವ ಹುಡುಗ'ನು ಪ್ರಶ್ನಿಸುವಷ್ಟು ಸಾಮಾಜಿಕ ಸ್ವಾತಂತ್ರ್ಯವನ್ನು ಅಂದಿನ ನಮ್ಮ ಕನ್ನಡ ನಾಡಿನ ರಾಜರು ನೀಡಿದ್ದರು ಎಂಬುದು ಗಮನಾರ್ಹ ಸಂಗತಿ. ನಮ್ಮ ನೆಲದ ಶ್ರೇಷ್ಠತೆ ಪ್ರತಿಯೊಬ್ಬ ಪ್ರಜೆಗೂ ಶಕ್ತಿಯನ್ನು; ಸ್ವಾತಂತ್ರ್ಯವನ್ನು ನೀಡಿರುವುದು ಇಲ್ಲಿ ಗೋಚರಿಸುತ್ತದೆ. ಪುರಾಣದಲ್ಲಿ ನೋಡಿದರೂ ಸಹ ನಮ್ಮ ನೆಲದ ಶ್ರೇಷ್ಠ ಪೌರಾಣಿಕ ಕೃತಿ 'ರಾಮಾಯಣ'ದಲ್ಲಿ ಅಗಸನೊಬ್ಬನ ಅಭಿಪ್ರಾಯವನ್ನು ಪರಿಗಣಿಸಿದ ಶ್ರೀರಾಮನು ತುಂಬು ಗರ್ಭಿಣಿಯಾಗಿದ್ದ ಸ್ವಂತ ಹೆಂಡತಿ ಸೀತಾಮಾತೆಯನ್ನು ಕಾಡಿಗೆ ಬಿಟ್ಟು ಬರುವಂತೆ ಆದೇಶಿಸುವ ಪ್ರಸಂಗ ನೆನಪಾಗುತ್ತದೆ. ಇಲ್ಲಿಯೂ ಸಹ ಅದೇ ಪ್ರಾಧಾನ್ಯತೆ ರೂವಾರಿಗೆ ದೊರೆತು ಮರುದಿನ ರಾಜನೆದುರು ಸಭೆಯೇ ನಡೆದು ಚೆನ್ನಕೇಶವನ ಮೂರ್ತಿಯಲ್ಲಿರುವ ದೋಷಪರೀಕ್ಷೆ ನಡೆಯುವಂತಾಗುತ್ತದೆ.

ಈ ಪರೀಕ್ಷೆಗೆ ಏನನ್ನು ಪಣವಾಗಿಡಬೇಕು ಎಂಬ ಪ್ರಶ್ನೆ ಬಂದಾಗ ಡಂಕಣನ "ನಿಲ್ಲಿಸಿ ಸ್ಥಪತಿಗಳೇ. ಪಣ ಸಮಾನರಲ್ಲಿರಬೇಕು. ನಾನು ನಿಮ್ಮ ಸಮಾನನಲ್ಲ. ವಯಸ್ಸಿನಲ್ಲಿ, ಅನುಭವದಲ್ಲಿ, ವಿದ್ಯೆಯಲ್ಲಿ ಕೂಡ ನಾನು ಹುಡುಗ. ಇದು ನನ್ನ ವಿದ್ಯೆಯ ಪರೀಕ್ಷೆ. ನಿಮ್ಮದಲ್ಲ. ನಿಮ್ಮ ಪಣವನ್ನು ನಾನು ಒಪ್ಪಲಾರೆ"[9] ಎಂಬ ಮಾತು ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಜ್ಞೆಯ ಪ್ರತೀಕವಾಗಿದೆ. ವಾಸ್ತವದಲ್ಲಿ ಪಾಂಡಿತ್ಯದ ಅಭಿಪ್ರಾಯಗಳ ನಡುವೆ ಪರೀಕ್ಷೆ ನಡೆಯುತ್ತಿದ್ದರೂ ಸಹ ಡಂಕಣ ಶಾಂತ ಸ್ವರೂಪಿಯೂ ವಿನಯವಂತನೂ ಆಗಿ ವರ್ತಿಸುತ್ತಾನೆ. ಆದರೆ ವಯಸ್ಸಿನಲ್ಲೂ ಅನುಭವದಲ್ಲೂ ಪಾಂಡಿತ್ಯದಲ್ಲೂ ಹಿರಿಯನೂ ಶ್ರೇಷ್ಠನೂ ಎನಿಸಿರುವ ಜಕ್ಕಣ ತಾಳ್ಮೆ ಕಳೆದುಕೊಂಡವನಾಗಿ ಅಸಭ್ಯವಾಗಿ ವರ್ತಿಸುತ್ತಾನೆ. ಚುಚ್ಚುವ ಮಾತುಗಳಿಂದ ಡಂಕಣನನ್ನು ಮೂದಲಿಸುತ್ತಾನೆ. ಇಲ್ಲಿ, ನಾವು ಕಲಿತ ವಿದ್ಯೆಯ ಮೌಲ್ಯವನ್ನು ಲೋಕವು ನಾವು ಸಮಾಜದೊಂದಿಗೆ ವ್ಯವಹರಿಸುವಾಗ ತೋರುವ ಔದಾರ್ಯ, ವಿನಯತೆ ಹಾಗೂ ಸಂಸ್ಕಾರಗಳಲ್ಲಿ ಗುರುತಿಸುತ್ತದೆ ಎಂಬ ಲೋಕಾಭಿಮತದ ನಿಲುವನ್ನು ನೆನೆಯಬೇಕಾಗುತ್ತದೆ.

ಈಗ ನಡೆಯುತ್ತಿರುವ ಪರೀಕ್ಷೆಯ ನಿರ್ಣಯವೇನೆಂದು (ಗೊಲ್ಲರ ಹುಡುಗನ ವೇಷದಲ್ಲಿರುವ) ಕೇಶವನು ಶಾಂತಲೆಯನ್ನು ಕೇಳಿದಾಗ ಆಕೆ "ಇದೆಲ್ಲ ನನಗೆ ಹ್ಯಾಗೆ ತಿಳಿದೀತಯ್ಯ? ಕೇಶವನೇ ತೋರಿಸುತ್ತಾನೆ ಇರು. ದೇವರು ಕೊಟ್ಟ ನಿರ್ಣಯ ಶತಮಾನಗಳಿಗೆ ಕೇಳಿಸುತ್ತದೆ. ಮನುಷ್ಯ ಕೊಟ್ಟ ನಿರ್ಣಯ ಹೆಚ್ಚೆಂದರೆ ಒಂದು ಗಂಟೆ ಮಾತ್ರ"[10] ಎಂದಾಗ ಗೊಲ್ಲರ ಹುಡುಗ "ಬಹಳ ದೊಡ್ಡ ಮಾತನ್ನು ಹೇಳಿದಿರಿ. ದೇವರಿಗೇ ದೇವರ ಜವಾಬ್ದಾರಿ ಹೇಳಿ ಎಚ್ಚರಿಸಿದಿರಿ. ತಾಯಿ!"[10] ಎಂದು ಹೇಳುವ ಮಾತುಗಳಲ್ಲಿ ವಾಸ್ತವದಲ್ಲಿ ನಿರ್ಣಯವೆಂಬುದು ದೇವರದೇ ಹೊರತು ಮನುಷ್ಯನದಲ್ಲ; ಮನುಷ್ಯನ ಕರ್ತವ್ಯವೇನಿದ್ದರೂ ಫಲಿತಾಂಶದ ಹಂಗಿಲ್ಲದೆ ಕರ್ಮಗಳನ್ನು ಮಾಡುವುದು ಎಂಬ ತತ್ವದರ್ಶನವಾಗುತ್ತದೆ. ಈ ಸಂದರ್ಭವು ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ಹೇಳಿರುವ "ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ" ಎಂಬ ಮಾತನ್ನು ನೆನಪಿಸುತ್ತದೆ.

ನಾಟಕದಲ್ಲಿ ಬರುವ ಮೇಳದವರು "ಶಿಲೆಯೊಳಗಿನ ನಿಜವ ಎಬ್ಬಿಸಿರಯ್ಯಾ ನಂಬಿದವರ ಗತಿಯೇನೆಂದು ಅಂಜಿ ಆಲಸಿಯಾಗಿ ಮಲಗಿದರೆ ಹೇಳಿರಯ್ಯಾ..."[10] ಎಂದು ಹಾಡುವ ಮೂಲಕ ಸತ್ಯ ಶಿಲೆಯೊಳಗೆ ಅಡಗಿದೆ, ಅದನ್ನು ಹೊರ ತರಬೇಕು ಎಂದು ಸಾಂಕೇತಿಕವಾಗಿ ಹಾಡುತ್ತಾರೆ. ಇಲ್ಲಿ ಶಿಲೆಯೊಳಗೆ ಇರುವ ನಿಜವೆಂದರೆ ಹೊರನೋಟಕ್ಕೆ ವಿಗ್ರಹದ ಅಂತರಂಗದಲ್ಲಿರುವ ಸತ್ಯ. ಆದರೆ

ವಾಸ್ತವದಲ್ಲಿ ಇದು ಮಾನವನ (ಜಕ್ಕಣನ) ಹೃದಯದಲ್ಲಿರುವ ಮಾನವೀಯತೆಯಾಗಿದೆ. ಯಾರು ತಮ್ಮಲ್ಲಿರುವ ಮಾನವೀಯತೆಯನ್ನು ಎಚ್ಚರ ಗೊಳಿಸುವರೋ, ಜಾಗೃತಗೊಳಿಸುವರೋ, ಅವರಿಗೆ ಸತ್ಯದ ಅರಿವಾಗುತ್ತದೆ, ನಿಜಾನಂದ ಉಂಟಾಗುತ್ತದೆ ಎಂಬುದು ಇಲ್ಲಿನ ಧ್ವನಿಯಾಗಿದೆ.

ಇದೇ ಸಂದರ್ಭದಲ್ಲಿ ರಾಣಿ ಶಾಂತಲೆ "ಬೆಳ್ಳಂ ಬೆಳಗು ನಿದ್ರೆಯಿಲ್ಲ ಸ್ವಾಮಿ. ಎರಡು ಗಾಳಿಗಳು ಎದುರೆದುರೆ ಅಪ್ಪಳಿಸಿ ಸುಂಟರಗಾಳಿಯಾಗಿ ಸುತ್ತಿ, ಕೇಶವನ ಕಲ್ಲಿನ ಕಣ್ಣಿನಲ್ಲಿ ಮಿಂಚಿನ ಬೆಳಕಾಡಿದಂತೆ ಕನಸಾಯಿತು"[10] ಎಂದು ಹೇಳುತ್ತಾಳೆ. ನಮ್ಮ ಕನ್ನಡ ನಾಡಿನ ಸಾಹಿತ್ಯ ತಂತ್ರಗಳಲ್ಲಿ ಕನಸಿನ ಬಳಕೆಯೂ ಉಂಟು. ಪ್ರಸ್ತುತ ನಾಟಕದಲ್ಲಿ 'ಗಾಳಿ', 'ಕಣ್ಣು' ಎಂಬ ಪದಗಳನ್ನು ವಿಶೇಷವಾಗಿ ಗಮನಿಸಬೇಕಾಗುತ್ತದೆ. 'ಎರಡು ಗಾಳಿಗಳು' ಎಂಬ ಮಾತಿನಲ್ಲಿ ಗಾಳಿಯಿಂದ ಜನಿಸಿದ ಗಾಳಿಯೇ ಸುಂಟರಗಾಳಿಯಾಗಿದೆ. ಎಂದರೆ 'ಒಂದು ಗಾಳಿ', 'ಎರಡು ಗಾಳಿ' ಎಂಬುದೇನೂ ಇಲ್ಲ. ಇರುವುದು ಒಂದೇ ಗಾಳಿ. ಆ ಗಾಳಿ ತನ್ನಿಂದ ತಾನೇ ದೂರವಾಗಿ ಮತ್ತೆ ಒಂದಾಗುವ ಕಥೆಯನ್ನು ಇದು ಸಾಂಕೇತಿಕವಾಗಿ ಹೇಳುತ್ತಿದೆ. ಅಲ್ಲದೆ 'ಕೇಶವನ ಕಣ್ಣು' ಎಂಬ ಮಾತನ್ನು ಗಮನಿಸಿದರೆ 'ಕಣ್ಣು'– ಸತ್ಯದರ್ಶನದ ಸಂಕೇತ. ಹಾಗಾಗಿ ಮುಂದೆ ತಂದೆ–ಮಕ್ಕಳು ನಿಜವರಿತು ಒಂದಾಗಲಿರುವ ಕಥೆಯನ್ನು ಈ ಕನಸು ರೂಪಕದಂತೆ ಸೂಚಿಸುತ್ತದೆ.

ನಾಟಕದಲ್ಲಿ ಕಂಡುಬರುವ ಮತ್ತಷ್ಟು ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳೆಂದರೆ ರಾಜ ವಿಷ್ಣುವರ್ಧನನು ದೇವಾಲಯದಲ್ಲಿ ಮೂರ್ತಿ ಪ್ರತಿಷ್ಠಾಪನೆ ಮಾಡಲು ಈಗಾಗಲೇ ಮುಹೂರ್ತವನ್ನು ನಿರ್ಣಯಿಸಿದ್ದಾನೆ. ಆ ಮುಹೂರ್ತ ಬಹಳ ಹತ್ತಿರವಿದೆ. ಆದರೆ ಈಗ ಯಾವ ಮೂರ್ತಿಯನ್ನು ಪ್ರತಿಷ್ಠಾಪಿಸಬೇಕಿತ್ತೋ ಅದನ್ನೇ ಒಡೆದು ಅದರಲ್ಲಿ ಇರಬಹುದಾದ ದೋಷವನ್ನು ನೋಡಬೇಕಾಗಿದೆ. ಒಡೆದ ವಿಗ್ರಹವನ್ನು ಹೇಳಿದ ಮುಹೂರ್ತಕ್ಕೆ ಸರಿಯಾಗಿ ಮರುಸ್ಥಾಪಿಸುವುದಾದರೂ ಹೇಗೆ? ಅದು ಸಾಧ್ಯವಾಗದಿದ್ದರೆ ಈಗಾಗಲೇ ಆಮಂತ್ರಣ ನೀಡಿರುವ ನೆರೆ ರಾಜ್ಯದ ಗಣ್ಯರಿಗೆ ಏನು ಕಾರಣ ಹೇಳುವುದು? 'ಮೂರ್ತಿ ಭಂಜನೆಯಾಗಿದೆ. ಹಾಗಾಗಿ ಪ್ರತಿಷ್ಠಾಪನೆಯನ್ನು ನಿಲ್ಲಿಸಲಾಗಿದೆ' ಎಂದು ಹೇಳಲಾಗುವುದಿಲ್ಲ. ಈ ಸಂದರ್ಭವು 'ವಚನಪಾಲನೆ'ಯ ಸಂಸ್ಕೃತಿಯನ್ನು ಹೇಳುತ್ತದೆ. 'ನಾವು ಕೊಟ್ಟ ಮಾತಿಗೆ ತಪ್ಪಬಾರದು; ನೀಡಿದ ವಚನಕ್ಕೆ ಬದ್ಧರಾಗಿರಬೇಕು' ಎಂಬ ಆಶಯವನ್ನು ಸಾರುತ್ತದೆ. ಅದರಲ್ಲೂ ರಾಜರೇ ವಚನಭ್ರಷ್ಟರಾದರೆ ಪ್ರಜೆಗಳ ಗತಿ ಏನು? ಅವರಲ್ಲಿ ಲೋಭಗಳು ಉದ್ಭವವಾಗುತ್ತವೆ; ರಾಜ್ಯದ ನೈತಿಕತೆ ಕುಸಿಯುತ್ತದೆ. ಈ ಎಲ್ಲಾ ಕಾರಣಗಳಿಂದ ಹೆದರಿದ ಮಹಾರಾಜನು 'ಡಂಕಣ ಮತ್ತು ಜಕ್ಕಣ ಇಬ್ಬರೂ ಸೇರಿ ಈಗಾಗಲೇ ಹೇಳಿರುವ ಮುಹೂರ್ತಕ್ಕೆ ಸರಿಯಾಗಿ ಹೊಸ ಮೂರ್ತಿಯೊಂದನ್ನು ನಿರ್ಮಿಸಬೇಕು' ಎಂಬ ಹೊಣೆಯನ್ನು ಹೊರಿಸುತ್ತಾನೆ.

ಇಲ್ಲಿ ರಾಜನಾದವನೂ ಸಹ ತಾನೇ ವಿಧಿಸಿದ ಸಾಮಾಜಿಕ ಕಟ್ಟುಪಾಡುಗಳಿಗೆ ಒಳಗಾಗಿ ನಡೆದುಕೊಳ್ಳುವ ರಾಜಕೀಯ ಪ್ರಜ್ಞೆ ಗೋಚರವಾಗುತ್ತದೆ. ಅಲ್ಲದೆ ರಾಣಿ ಶಾಂತಲೆಯ ವ್ಯಕ್ತಿತ್ವವನ್ನು ಕುರಿತು ಹೇಳುವಾಗ ರಾಜನು "ಅವರಿಗೆ ಶಿಲ್ಪಶಾಸ್ತ್ರವೂ ಗೊತ್ತು; ಮನುಷ್ಯ ವ್ಯಕ್ತಿತ್ವದ ಶಿಲ್ಪವೂ ಗೊತ್ತು; ಎರಡರ ಅಂತರಂಗ ಬಹಿರಂಗಗಳೂ ಗೊತ್ತು"[11] ಎಂದು ಹೇಳಿರುವಲ್ಲಿ ರಾಣಿಯಾದವರಿಗೆ ಇರಬೇಕಾದ ಗುಣಗಳನ್ನು ಕಾಣುತ್ತೇವೆ. ಅಲ್ಲದೆ ರಾಜನು ತನ್ನ ಹೆಂಡತಿಯನ್ನು ಗೌರವದಿಂದ 'ಅವರು' ಎಂದು ಸಂಬೋಧಿಸಿರುವುದು ರಾಜನು ತನ್ನ ಮಡದಿಗೆ (ಮಹಿಳೆಗೆ) ನೀಡಿದ್ದ ಸ್ಥಾನಮಾನಗಳ ಕುರಿತು ಬೆಳಕು ಚೆಲ್ಲುತ್ತದೆ.

ನಾಟಕವು ಮುಂದುವರಿದಂತೆ ಸಾಂಸ್ಕೃತಿಕ ಪ್ರಜ್ಞೆಯನ್ನು ಸಾರುವ ಮತ್ತಷ್ಟು ಅಂಶಗಳು ನಮಗೆ ಕಾಣಸಿಗುತ್ತವೆ. ರಾಜ್ಯವೆಂದರೇನು? ಅದರ ಕರ್ತವ್ಯವೇನು? ಎಂದು ಹೇಳುವ ಸಂದರ್ಭದಲ್ಲಿ

ರಾಜ ವಿಷ್ಣುವರ್ಧನನು "ರಾಜ್ಯವೆಂದರೆ ಶತ್ರುಗಳನ್ನು ಗೆದ್ದು ಬರೀ ಬೊಕ್ಕಸ ತುಂಬಿಕೊಳ್ಳುವುದಲ್ಲ, ರಾಜ್ಯದ ಸೀಮೆಯ ವಿಸ್ತಾರವೂ ಅಲ್ಲ, ವೈಭವ ಪ್ರದರ್ಶನವೂ ಅಲ್ಲ. ಪ್ರಜೆಗಳನ್ನು ನೆಮ್ಮದಿಯಿಂದ ಇಡುವುದೇ ರಾಜ್ಯ"[12] ಎಂದು ವ್ಯಾಖ್ಯಾನಿಸಿರುವುದು ಅರಸನು ಪ್ರಜೆಗಳಿಗೆ ತೋರಿಸುತ್ತಿದ್ದ ಮನ್ನಣೆಯನ್ನು ಹಾಗೂ ರಾಜನ ಹೃದಯವೈಶಾಲ್ಯತೆಯನ್ನು ತೋರಿಸುತ್ತದೆ. ಈ ಮಾತಿನಂತೆ ಅವರು ಗೂಢಚಾರರ ಸಹಾಯದಿಂದ ಜಕ್ಕಣನ ವೃತ್ತಾಂತವನ್ನು ತಿಳಿದಿರುತ್ತಾರೆ. ಅದಲ್ಲದೆ ಬರೆದಿಟ್ಟ ಶಾಸ್ತ್ರವನ್ನು ನಂಬಿ ಹೆಂಡತಿ ಮಕ್ಕಳಿಂದ ದೂರಾಗಿದ್ದ ಜಕ್ಕಣನ ಅಹಂಕಾರವನ್ನು ಹೋಗಲಾಡಿಸಿ ಸುತ–ಪತ್ನಿಯರೊಡನೆ ಒಂದಾಗುವಂತೆ ಮಾಡುತ್ತಾರೆ.

ಒಟ್ಟಿನಲ್ಲಿ ಚನ್ನಕೇಶವನ ಮೂರ್ತಿಯನ್ನು ಒಡೆದಾಗ ಅದರೊಳಗಿರುವ ಕಪ್ಪೆ, ಮರಳು, ನೀರು ಹೊರಬರುವಂತೆ ಜಕ್ಕಣನ ಹೃದಯದಲ್ಲಿದ್ದ ಕಲ್ಮಶ ಹೊರದೂಡಲ್ಪಟ್ಟು ಆತನಿಗೆ ಸತ್ಯದ ಅರಿವಾಗುತ್ತದೆ. ಆತನ ದೃಷ್ಟಿಗೆ ಅಂಟಿದ್ದ ಪೊರೆ ದೂರವಾಗಿ ಹೆಂಡತಿ, ಮಗ ಮತ್ತು ಕೇಶವನನ್ನು ಗುರುತಿಸುವಂತಾಗುತ್ತಾನೆ. ಹೀಗೆ ಅಹಂಕಾರವನ್ನು ಅಳಿಸಿ ಮಾನವೀಯತೆಯನ್ನು ಮೂಡಿಸುವ ವಿಶಿಷ್ಟ ಗುಣಗಳಿಂದ ಕೂಡಿರುವ ಈ ನಾಟಕ ಶುಭ ಪ್ರಸಂಗದೊಂದಿಗೆ ಅಂತ್ಯವಾಗುತ್ತದೆ. ನಾಟಕದಲ್ಲಿ ವೈಯಕ್ತಿಕ ಹಾಗೂ ಸಾಮಾಜಿಕ ಮೌಲ್ಯಗಳು ಹೇರಳವಾಗಿ ಮಿಳಿತಗೊಂಡು ಸಂಸ್ಕೃತಿಯ ಮಹತ್ವವನ್ನು ಸಾರುವ ಅನೇಕ ಅಂಶಗಳನ್ನು ಒಳಗೊಂಡಿದೆ. ಇದರೊಂದಿಗೆ ಪಾಂಡಿತ್ಯ, ಶಾಸ್ತ್ರ, ಮಾನವೀಯತೆಗಳ ಅರ್ಥ ಮತ್ತು ಆಶಯಗಳನ್ನು ಕುರಿತು ಓದುಗರು ಜಿಜ್ಞಾಸೆ ಮಾಡುವಂತೆ ಪ್ರೇರೇಪಿಸುತ್ತದೆ.

ಕೊನೆ ಟಿಪ್ಪಣಿ:

1. ತಿಪ್ಪೇರುದ್ರಸ್ವಾಮಿ ಎಚ್. (2010). *ಕರ್ನಾಟಕ ಸಂಸ್ಕೃತಿ ಸಮೀಕ್ಷೆ.* ಪು.ಸಂ. 12
2. ಅದೇ. ಪು.ಸಂ.14
3. ಅದೇ. ಪು.ಸಂ.12
4. ನರಸಿಂಹಾಚಾರ್ ಡಿ. ಎಲ್. (2015). *ಪೀಠಿಕೆಗಳು ಮತ್ತು ಲೇಖನಗಳು.* ಪು.ಸಂ.1009
5. ಚಂದ್ರಶೇಖರ ಕಂಬಾರ. (2016). *ಜಕ್ಕಣ ಮತ್ತು ಇತರ ಏಕಾಂಕ ನಾಟಕಗಳು.* ಪು.ಸಂ.11
6. ಅದೇ. ಪು.ಸಂ.15
7. ಅದೇ. ಪು.ಸಂ.17
8. ಅದೇ. ಪು.ಸಂ.20
9. ಅದೇ. ಪು.ಸಂ.21
10. ಅದೇ. ಪು.ಸಂ.23
11. ಅದೇ.ಪು.ಸಂ.25
12. ಅದೇ.ಪು.ಸಂ.26

ಆಕರ ಗ್ರಂಥ

- ಚಂದ್ರಶೇಖರ ಕಂಬಾರ. (2016). *ಜಕ್ಕಣ ಮತ್ತು ಇತರ ಏಕಾಂಕ ನಾಟಕಗಳು.* (ದ್ವಿತೀಯ ಮುದ್ರಣ), ಅಂಕಿತ ಪುಸ್ತಕ.

ಪರಾಮರ್ಶನ ಗ್ರಂಥಗಳು

- ಸಿ.ಪಿ.ಕೆ. (ಸಂ.). (2015). ಯಶೋಧರ ಚರಿತ. (ಆರನೆಯ ಮುದ್ರಣ), ನಾಗಾರ್ಜುನ ಎಂಟರ್‌ಪ್ರೈಸಸ್.
- ಚಂದ್ರಶೇಖರ ಕಂಬಾರ. (2011). *ದೇಶೀಯ ಚಿಂತನ.* (ಎರಡನೆಯ ಮುದ್ರಣ). ಅಂಕಿತ ಪುಸ್ತಕ.
- ಕುವೆಂಪು. (2017). *ಶ್ರೀ ರಾಮಾಯಣ ದರ್ಶನಂ.* ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.
- ಕುವೆಂಪು. (2017). *ಕೋಗಿಲೆ ಮತ್ತು ಸೋವಿಯಟ್ ರಷ್ಯಾ.* (ಎಂಟನೆಯ ಮುದ್ರಣ) ಉದಯ ರವಿ ಪ್ರಕಾಶನ

- ನರಸಿಂಹಾಚಾರ್ ಡಿ. ಎಲ್. (2015). *ಪೀಠಿಕೆಗಳು ಮತ್ತು ಲೇಖನಗಳು.* (ತೃತೀಯ ಮುದ್ರಣ), ಡಿ.ವಿ.ಕೆ. ಮೂರ್ತಿ ಪ್ರಕಾಶನ.
- ಸಿದ್ದಲಿಂಗಯ್ಯ ಜಿ.ಎಸ್. ಮತ್ತು ಕೃಷ್ಣಯ್ಯ ಎಂ, ಎಚ್. (ಸಂ.) (2006). *ಸಾಲು ದೀಪಗಳು.* (ಐದನೆಯ ಮುದ್ರಣ). ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಸ್ವಾಮಿ ಆದಿದೇವಾನಂದ. (2008). ಶ್ರೀಮದ್‌ಭಗವದ್ಗೀತಾ. (ಹದಿನಾರನೆಯ ಮುದ್ರಣ), ಶ್ರೀ ರಾಮಕೃಷ್ಣ ಆಶ್ರಮ.
- ತಿಪ್ಪೇರುದ್ರಸ್ವಾಮಿ ಎಚ್. (2010). *ಕರ್ನಾಟಕ ಸಂಸ್ಕೃತಿ ಸಮೀಕ್ಷೆ.* (ಹತ್ತನೆಯ ಮುದ್ರಣ) ಡಿ.ವಿ.ಕೆ. ಮೂರ್ತಿ ಪ್ರಕಾಶನ.